# ಶ್ರೀಮಾತೆ -ಒಂದು ಪ್ರವಚನ

ಇಂಗ್ಲಿಷ್ ಮೂಲ : **ಸ್ವಾಮಿ ಅಶೇಷಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

(ಭಾಗ ೨)

ಶ್ರೀಮಾತೆಯವರ ಮಹಾಸಮಾಧಿಯ ನಂತರ ನಾನು ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡೆ. ಶ್ರೀಮಾತೆಯವರ ಒಡನಾಡಿಗಳಾಗಿದ್ದ ಗೋಲಾಪ್ ಮಾ ಹಾಗೂ ಯೋಗಿನ್ ಮಾ ಅವರ ಸೇವೆ ಮಾಡುವ ಭಾಗ್ಯ ನನಗೆ ಒದಗಿ ಬಂತು. ಅವರ ಸೇವೆ ಮಾಡುವ ಕಾರ್ಯ ಸುಲಭವಲ್ಲ — ಅದನ್ನು ಈಗ ನಾನು ಹೇಳಬಲ್ಲೆ. ಅವರು ಪ್ರತಿಯೊಂದರಲ್ಲೂ ಕಟ್ಟುನಿಟ್ಟಾಗಿದ್ದರು. ಒಂದು ದಿನ ನಾನು ಗೋಲಾಪ್ ಮಾಗೆ ಹೇಳಿದೆ: ''ಶ್ರೀಮಾತೆಯವರು ಬದುಕಿದ್ದಾಗ ಆಶ್ರಮ ಸೇರಿದ್ದರೆ, ಅವರ ಸೇವೆ ಮಾಡಬಹುದಾಗಿತ್ತು.'' ಆಗ ಅವರೆಂದರು, ''ಅವರನ್ನು ಯಾರು ಅರ್ಥಮಾಡಿಕೊಳ್ಳುತ್ತಿದ್ದರು? ನಾನು ಅವರಿಗೆ ಅತ್ಯಂತ ಹತ್ತಿರವಿದ್ದುಕೊಂಡೇ ಬದುಕಿದೆ, ಆದರೂ ನನಗೆ ಅವರನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ.'' ಅನಂತರ ಅವರು ನನಗೆ ಈ ಘಟನೆಯನ್ನು ವಿವರಿಸಿದರು. ಶ್ರೀಮಾತೆಯವರು ಹೆಚ್ಚಾಗಿ ತಿನ್ನಿಸುತ್ತಿದ್ದುದರಿಂದ ಶ್ರೀರಾಮಕೃಷ್ಣರ ಕಾಯಿಲೆ ಉಲ್ಬಣಗೊಂಡಿತೆಂದು, ಶ್ರೀರಾಮಕೃಷ್ಣರು ದಕ್ಷಿಣೇಶ್ವರದಿಂದ ಹೊರಟು ಶ್ಯಾಮಪುಕುರಕ್ಕೆ ಹೋದರೆಂದು ಗೋಲಾಪ್ ಮಾ ಯಾರಿಂದಲೋ ಕೇಳಿಸಿಕೊಂಡರು. ಆಗ ಶ್ರೀಮಾತೆ ದಕ್ಷಿಣೇಶ್ವರದ ನಹಬತ್‌ನಲ್ಲಿ ವಾಸವಾಗಿದ್ದರು. ಆ ಮಾತನ್ನು ಕೇಳಿದಕೂಡಲೇ ಶ್ರೀಮಾತೆ ಶ್ರೀರಾಮಕೃಷ್ಣರ ಬಳಿಗೆ ಹೋಗಿ ಕೇಳಿದರು, ''ನನ್ನ ಸೇವೆಯಿಂದ ನಿಮಗೆ ಅಸಮಾಧಾನವಾಯಿತೆ? ಅದಕ್ಕಾಗಿ ನೀವು ಶ್ಯಾಮಪುಕುರಕ್ಕೆ ಬಂದಿರಾ?'' ಶ್ರೀರಾಮಕೃಷ್ಣರು ಚಕಿತರಾಗಿ, ''ಯಾರು ಹಾಗೆಂದರು?'' ಎಂದು ಕೇಳಿದರು. ಆಗ ಶ್ರೀಮಾತೆ ತಿಳಿಸಿದರು, ಗೋಲಾಪ್ ಮಾ ಈ ರೀತಿ ತಿಳಿಸಿದಳು ಎಂಬುದಾಗಿ. ''ಆ ಬ್ರಾಹ್ಮಣ ಹೆಂಗಸು ಇಲ್ಲಿಗೆ ಬರಲಿ. ನಾನು ಅವಳಿಗೆ ಒಂದು ಪಾಠ ಕಲಿಸುತ್ತೇನೆ'' ಎಂದರು ಶ್ರೀರಾಮಕೃಷ್ಣರು. ಶ್ರೀರಾಮಕೃಷ್ಣರಿಗೆ ಕೋಪ ಬಂದಾಗ ಯಾರಿಗೂ ಅವರ ಬಳಿಗೆ ಹೋಗುವ ಧೈರ್ಯ ಬರುತ್ತಿರಲಿಲ್ಲ. ಮರುದಿನ ಗೋಲಾಪ್ ಮಾ ಬಂದರು. ಶ್ರೀರಾಮಕೃಷ್ಣರು ಅವರನ್ನು ಕೇಳಿದರು, ''ನೀನು ಹಾಗೆ ಹೇಳಿದೆಯಾ? ಹೇಳಿದೆಯಾ? ಈಗಲೇ ಹೋಗಿ ಅವಳ ಕ್ಷಮೆ ಕೇಳು. ಅವಳಿಗೆ ಅಸಮಾಧಾನವುಂಟಾದರೆ, ನಿನಗೆ ಇಲ್ಲಿ ಜಾಗವಿಲ್ಲ.'' ಮತ್ತೆ ಅವರು ಹೇಳಿದರು, ''ಶಾರದಾ-ಸರಸ್ವತಿ, ಅವಳು ಶಾರದೆಯಾಗಿ (ಅಂದರೆ, ಹೆಸರನ್ನು ಕುರಿತು) ಕಂಡರೂ, ನಿಜವಾಗಿ ಅವಳೇ ಜಗನ್ಮಾತೆ; ಜ್ಞಾನ-ವಿವೇಕಗಳನ್ನು ನೀಡುವವಳು. ಅವಳು ವಿವೇಕ ನೀಡಲು, ಭಗವಂತನ ಜ್ಞಾನವನ್ನು ನೀಡಲು, ತನ್ನ ಕೃಪೆಯ ಮೂಲಕ ಸಾಕ್ಷಾತ್ಕಾರ ನೀಡಲು ಬಂದಿದ್ದಾಳೆ.'' ಬಳಿಕ ಗೋಲಾಪ್ ಮಾ ನನಗೆ ಹೇಳಿದರು, ಶ್ಯಾಮಪುಕುರದಿಂದ ದಕ್ಷಿಣೇಶ್ವರದವರೆಗೆ, ಉದ್ದಕ್ಕೂ ಅವರು ಅಳುತ್ತಲೇ ಬಂದರು; ಶ್ರೀಮಾತೆಯವರ ಪಾದಗಳಲ್ಲಿ ಬಿದ್ದು ಹೇಳಿದರು, ''ಅಮ್ಮಾ, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಯಾರಿಂದಲೋ ಹಾಗೆಂದು ಕೇಳಿದೆ, ಅದನ್ನು ನಿಮಗೆ ಹೇಳಿದೆನಷ್ಟೆ. ನಾನು ಹಾಗೆ ಮಾಡಬಾರದಿತ್ತು, ನನ್ನನ್ನು ಕ್ಷಮಿಸಿ. ಠಾಕೂರರು ತುಂಬಾ ಕೋಪಿಸಿಕೊಂಡಿದ್ದಾರೆ. ನೀವು ನನ್ನನ್ನು ಕ್ಷಮಿಸುವವರೆಗೂ ನಾನು ಅವರ ದರ್ಶನ ಮಾಡಲು ಬಿಡಲಾರರು.'' ಆಗ ಶ್ರೀಮಾತೆ ಅವರ ಬೆನ್ನನ್ನು ತಟ್ಟುತ್ತಾ, ''ಮರೆತು ಬಿಡಮ್ಮಾ; ನೀನು ನನ್ನ ಮಗಳು. ತಾಯಿ ಎಂದಿಗೂ ಮಗಳ ಮೇಲೆ ಕೋಪ ಮಾಡಲಾರಳು. ನೀನು ಠಾಕೂರರಿಗೆ ಹೋಗಿ ಹೇಳು, ನಿನ್ನ ಬಗ್ಗೆ ನನಗೆ ಅಸಂತೋಷವೇನೂ ಇಲ್ಲ ಎಂಬುದಾಗಿ.'' ಗೋಲಾಪ್ ಮಾ ಎಷ್ಟೊಂದು ಮುಕ್ತವಾಗಿ ಮಾತನಾಡುವ ಸ್ವಭಾವದವರೆಂದರೆ, ಅದರಿಂದಾಗಿಯೇ ಅವರಿಗೆ ತೊಂದರೆಯುಂಟಾಯಿತು. ಶ್ರೀಮಾತೆಯವರ ಅನುಪಮವಾದ ದಿವ್ಯ ಸ್ವಭಾವ ಹಾಗೂ ಔನ್ನತ್ಯವನ್ನು ಕುರಿತು ಶ್ರೀರಾಮಕೃಷ್ಣರೇ ಗೋಲಾಪ್ ಮಾ ಅವರ ಕಣ್ಣು ತೆರೆಸಿದರು.

ಹೀಗೆ ಶ್ರೀಮಾತೆಯವರು ತಮ್ಮ ಜೀವನ-ಅನುಭವಗಳ ಮೂಲಕ ಪ್ರಕಟಪಡಿಸಿದ ಆಧ್ಯಾತ್ಮಿಕ ಜ್ಞಾನವು ನಮ್ಮ ನಂಬಿಕೆ ಹಾಗೂ ಬುದ್ಧಿಶಕ್ತಿಗೆ ಮೀರಿದ ಸಂಗತಿಯಾಗಿದೆ. ನಮ್ಮ 'ಮತಾಂಧ ನಿದ್ರೆ' (dogmatic slumber)ಯಿಂದ ಎಚ್ಚರಿಸುವ ಗುಣ ಇದಕ್ಕಿದೆ. ಶ್ರೀಮಾತೆಯವರ ಆಧ್ಯಾತ್ಮಿಕ ಅರಿವಿನಲ್ಲಿ ಜ್ಞಾತೃ-ಜ್ಞೇಯಗಳೆಂಬ ಭೇದವಿಲ್ಲದ — ಅಲೌಕಿಕ ಅನುಭವದ ಹಿನ್ನೆಲೆಯಿದೆ. ಒಂದು ಹಂತದಲ್ಲಿ ನಮ್ಮ ವಿಚಾರ ಅವೈಚಾರಿಕವಾಗುತ್ತದೆ; ವಿಚಾರವು ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಾಗದು ಎಂದು ನಮಗೆ ತಿಳಿದುಬರುತ್ತದೆ. ವಿಚಾರವು ಜ್ಞಾತೃ -ಜ್ಞೇಯಗಳನ್ನು ವಿಂಗಡಿಸುತ್ತದೆ; ಕಾಲ, ದೇಶ, ಕಾರ್ಯಕಾರಣ ಸಂಬಂಧಗಳನ್ನು ನಿರ್ಣಯಿಸುತ್ತದೆ. ವಿಚಾರದ ಮೂಲಕ ನಾವು ಅರಿಯುವ ಪ್ರತಿಯೊಂದೂ ಬುದ್ಧಿಯ ಪ್ರಭಾವಕ್ಕೆ ಒಳಗಾಗುತ್ತದೆ. ನಾವು ಕಾಲ, ದೇಶ, ಕಾರ್ಯಕಾರಣಗಳಲ್ಲಿ ಜೀವಿಸುವವರೆಗೂ ನಮ್ಮ ಜ್ಞಾನವೆಲ್ಲ ವ್ಯಾವಹಾರಿಕವಾಗಿರುತ್ತದೆ. ಇದನ್ನೇ ಮಾಯೆಯೆಂದು ಕರೆಯುತ್ತೇವೆ. ಇದು ಭ್ರಮೆಯಲ್ಲ. ನಮ್ಮ ಪ್ರಜ್ಞೆಯ ಅವಸ್ಥೆಗೆ ಸೇರಿದ್ದು ಮಾತ್ರವೆಂದೇ ಇದರ ಅರ್ಥ. ಪಾಶ್ಚಾತ್ಯ ದೇಶಗಳು ಎರಡು ಪರಂಪರೆಗಳನ್ನು ಅಂಗೀಕರಿಸಿವೆ: ಒಂದು

ದೇವತಾಶಾಸ್ತ್ರದ ಪರಂಪರೆ, ಇನ್ನೊಂದು ವೈಜ್ಞಾನಿಕ ಪರಂಪರೆ. ಇವೆರಡೂ ಕೆಳದರ್ಜೆಯ ಜ್ಞಾನ; ಶ್ರೀಮಾತೆಯವರು ವ್ಯಕ್ತಗೊಳಿಸುವ ಆಧ್ಯಾತ್ಮಿಕ ಜ್ಞಾನವಲ್ಲ. ಅವರ ಜೀವನ ಹಾಗೂ ಆಧ್ಯಾತ್ಮಿಕ ಅನುಭವಗಳು ದ್ವೈತ ಜಗತ್ತಿನ ನೆಲೆಯನ್ನು ಮೀರಿ ನಿಂತಿವೆ. ಮಾನವನು ಯಾವುದನ್ನು ಅರಸಬೇಕು, ಹೇಗೆ ಅರಸಬೇಕು ಎಂಬುದನ್ನು ಅವರ ಜೀವನವು ತೋರಿಸಿಕೊಡುತ್ತದೆ. ಕ್ರೈಸ್ತ, ಶ್ರೀರಾಮಕೃಷ್ಣ, ಶ್ರೀಮಾತೆಯವರಂತಹ ಶ್ರೇಷ್ಠ ಗುರುಗಳು ಮಾನವನಿಗೆ ಭಗವಂತನ ಅನುಭವ ಸತ್ಯವೆಂಬುದನ್ನು ತೋರಿಸಿಕೊಡುವಂತೆ ಜೀವನ ನಡೆಸುತ್ತಾರೆ. ಇಂಥ ದೈವೀ ಮಹಾಪುರುಷರು ತಮ್ಮ ಬದುಕಿನ ಮೂಲಕ ನಮ್ಮ ಮುಂದೆ ತೋರಿಸಿಕೊಟ್ಟ ಆಧ್ಯಾತ್ಮಿಕ ಆದರ್ಶಗಳಿಗೆ ಅನುಗುಣವಾಗಿ ನಮ್ಮ ಜೀವನವನ್ನು ನಡೆಸಲು ಯತ್ನಿಸಬೇಕು. ಶ್ರೀಮಾತೆಯವರಂತಹ ಶ್ರೇಷ್ಠ ವ್ಯಕ್ತಿಗಳು ಧರೆಗಿಳಿದು ಬಂದುದು ಮೃತ್ಯುವಿನ ಗಡಿಯನ್ನು ದಾಟಲು, ನಮ್ಮ ನೈಜ ಸ್ವರೂಪವನ್ನೂ ಅರಿಯಲು ಅಗತ್ಯವಾದ ಪರಾವಿದ್ಯೆಯನ್ನು ನೀಡುವುದಕ್ಕಾಗಿ. ಮಾನವ ಕುಲಕ್ಕೆ ಅವರ ಜೀವನ ಅತ್ಯುನ್ನತ ಕೃಪಾಶೀರ್ವಾದವಾಗಿವೆ. ಆದ್ದರಿಂದ, ಎಲ್ಲಿಯವರೆಗೆ ನಾನು ಶ್ರೀಮಾತೆಯವರ ಹೆಜ್ಜೆಯಲ್ಲೇ ನಡೆಯುತ್ತೇನೋ, ಅವರು ತಮ್ಮ ಅನಂತ ಕೃಪೆಯನ್ನು ಹರಿಸಿ ನೀಡಿದ ಮಂತ್ರದ ಜಪವನ್ನು ಪ್ರಾಮಾಣಿಕವಾಗಿ ಮಾಡುತ್ತೇನೋ, ಅಲ್ಲಿಯವರೆಗೂ ಅವರು ನನಗೆ ವಹಿಸಿದ ಕಾರ್ಯವನ್ನು ನನಗೆ ತೃಪ್ತಿಯಾಗುವಂತೆ ಮಾಡಲು ಸಾಧ್ಯವಾಗುವುದೆಂದು ನಾನು ನಂಬಿದ್ದೇನೆ. ಮಾನವನು ತನ್ನೊಳಗೆಯೇ ನೆಮ್ಮದಿಯನ್ನು ಕಾಣದಿದ್ದರೆ ಇತರರಿಗೆ ನೆಮ್ಮದಿ ನೀಡಲಾರ. ಒಂದು ದೀಪ ಮಾತ್ರವೇ ಇನ್ನೊಂದು ದೀಪವನ್ನು ಬೆಳಗುವುದು. ಸಾಕ್ಷಾತ್ ಜಗನ್ಮಾತೆಯೇ ಆಗಿರುವ ಶ್ರೀಮಾತೆಯವರು ಮನುಕುಲಕ್ಕೆ ಬ್ರಹ್ಮಜ್ಞಾನ ಹಾಗೂ ಇಹಲೋಕದಿಂದ ಮುಕ್ತಿ ನೀಡಬಲ್ಲ ಬೆಳಕನ್ನು ನೀಡಿದರು.

ಶ್ರೀಮಾತೆಯವರ ಶಿಷ್ಯನಾದ ಚಂದ್ರಮೋಹನ ದತ್ತನು ಒಂದು ಸಲ ಸ್ವಾಮಿ ಶುದ್ಧಾನಂದರೊಂದಿಗೆ ಸ್ನಾನ ಮಾಡಲು ಹೋಗುತ್ತಿದ್ದರಂತೆ. (ಸ್ವಾಮಿ ಶುದ್ಧಾನಂದರು ಮುಂದೆ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದರು.) ಆಗ ನಾನು 'ಉದ್ಬೋಧನ' ಕಾರ್ಯಾಲಯದಲ್ಲಿ ವ್ಯವಸ್ಥಾಪಕರ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಚಂದ್ರನು ಪುಸ್ತಕಗಳ ಪ್ಯಾಕ್ ಮಾಡುವ ಕೆಲಸ ಮಾಡುತ್ತಿದ್ದ. ಸ್ವಾಮಿ ಶುದ್ಧಾನಂದರು ಚಂದ್ರನಿಗೆ ಹೇಳಿದರು, ''ನೀನು ಶ್ರೀಮಾತೆಯವರ ಬಳಿಗೆ ಹೋದರೆ, ಏನನ್ನು ಬೇಡಿಕೊಳ್ಳುವೆ?'' ಅದಕ್ಕೆ ಚಂದ್ರ ಹೇಳಿದ, ''ನನಗೆ ಸ್ವಲ್ಪ ಸಿಹಿತಿಂಡಿ ಪ್ರಸಾದವನ್ನು ಕೊಡಿ ಎಂದು ಕೇಳುತ್ತೇನೆ.'' ಆಗ ಸ್ವಾಮೀಜಿ ಹೇಳಿದರು, ''ಬರೀ ಪ್ರಸಾದವನ್ನು ಕೇಳುವುದಕ್ಕಾಗಿ ನೀನು ಶ್ರೀಮಾತೆಯವರ ಬಳಿಗೆ ಬಂದೆಯಾ? ಕೇವಲ ಅಷ್ಟು ಮಾತ್ರಕ್ಕಾಗಿಯೆ? ಶ್ರೀಮಾತೆಯವರು ಮುಕ್ತಿದಾಯಿನಿ; ನೀನು ಅವರನ್ನು ಬ್ರಹ್ಮಜ್ಞಾನ ಮತ್ತು ಮುಕ್ತಿ ನೀಡಲು ಪ್ರಾರ್ಥಿಸಿಕೋ.'' ಚಂದ್ರ ಹೇಳಿದ, ''ಆಗಲಿ ಸ್ವಾಮೀಜಿ, ನಾನು ಹಾಗೆಯೇ ಮಾಡುತ್ತೇನೆ.'' 'ಉದ್ಬೋಧನ'ಕ್ಕೆ ಮರಳಿ ಬಂದ ಚಂದ್ರ ಶ್ರೀಮಾತೆಯವರ ಕೋಣೆಗೆ ಮೆಟ್ಟಿಲೇರಿ ಹೋದ — ಮೆಟ್ಟಿಲು ಗೋಲಾಪ್ ಮಾ ಅವರ ಕೋಣೆಯ ಮುಂಭಾಗದಲ್ಲಿತ್ತು. ಆಗ ಶ್ರೀಮಾತೆಯವರು ಮಧ್ಯಾಹ್ನದ ನೈವೇದ್ಯ ಮಾಡುತ್ತಿದ್ದರು. ಪದ್ಧತಿಯಂತೆ ಅವರು ಆ ಸಮಯದಲ್ಲಿ ಏನನ್ನೂ ಹೇಳದೆ ಮೌನವಾಗಿದ್ದರು. ಚಂದ್ರನನ್ನು ನೋಡಿದ ಶ್ರೀಮಾತೆಯವರು ಸನ್ನೆಯ ಮೂಲಕ ಅವನ್ನನ್ನು ಕೇಳಿದರು, ''ನಿನಗೇನಾಗಬೇಕು, ಮಗೂ?'' ಚಂದ್ರ ವಿವರಿಸಿ ಹೇಳಿದ, ''ಆಗ ನನ್ನ ಎದೆ ಹೊಡೆದುಕೊಳ್ಳುತ್ತಿತ್ತು. ನಾನು ಯೋಚಿಸುತ್ತಿದ್ದೆ — ಶ್ರೀಮಾತೆಯವರನ್ನೂ ಹೀಗೆ ಕೇಳಬೇಕು — ಅಮ್ಮಾ ನನಗೆ ದಯವಿಟ್ಟು ಬ್ರಹ್ಮಜ್ಞಾನ ನೀಡಿ, ಅದು ಅಸಾಧ್ಯವಾಗಿದ್ದರೆ, ಮುಕ್ತಿ ನೀಡಿ ಅಂತ. ಆದರೆ ನನ್ನ ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲ. ನನಗೆ ಉಸಿರುಗಟ್ಟಿದಂತೆ ಅನ್ನಿಸುತ್ತಿತ್ತು. ಹೇಗೋ ನಾನು ಬಡಬಡಿಸಿದೆ, ''ಅಮ್ಮಾ ಪ್ರಸಾದ!'' ಆಗ ಶ್ರೀಮಾತೆಯವರು ತಮ್ಮ ಮಂಚದ ಕೆಳಗೆ ಬಟ್ಟೆಯಿಂದ ಮುಚ್ಚಿಟ್ಟಿದ್ದ ಪ್ರಸಾದದ ತಟ್ಟೆಯತ್ತ ಕೈ ತೋರಿಸಿದರು. ನಾನು ಅದರಿಂದ ರಸಗುಲ್ಲ, ಸಂದೇಶ ಹಾಗೂ ಚಂ ಚಂ (ಒಂದು ಬಗೆಯ ಸಿಹಿ ತಿಂಡಿ) ತೆಗೆದುಕೊಂಡು, ಅಲ್ಲಿಂದ ಹೊರಟು ಬಂದೆ.'' ಸ್ವಾಮಿ ಶುದ್ಧಾನಂದರಿಗೆ ಅವನು ಹೇಳಿದ, ''ಸ್ವಾಮೀಜಿ, ನಾನು ಕೇಳಬೇಕೆಂದು ಸಿದ್ಧನಾಗಿದ್ದೆ, ಆದರೆ ಅಷ್ಟರಲ್ಲಿ ಏನೋ ಆಯಿತು, ನನಗೆ ಏನಾಯಿತೆಂದೇ ಅರ್ಥವಾಗಲಿಲ್ಲ'' ಎಂದ.

ಆದಕಾರಣ, ಇದನ್ನು ಹೇಳಿಕೊಡಲಾಗದು; ಮಾಯೆಯ ಬಂಧನದಿಂದ ಬಿಡಿಸುವಂತೆ, ತಾಯಿಯ ಬಳಿ ಮಗು ನಿರಂತರ ಕಾಡಿ ಬೇಡುವ ರೀತಿ ಇದು. ಆದರೆ ಚಂದ್ರನು ಶ್ರೀಮಾತೆಯವರ ಮೇಲೆ ಅಸಾಧಾರಣ ಭಕ್ತಿಯನ್ನು ಹೊಂದಿದ್ದ. ಶ್ರೀಮಾತೆಗೂ ಅವನು ಅತ್ಯಂತ ಪ್ರೀತಿಪಾತ್ರನಾಗಿದ್ದ. ಕೊನೆಯ ಗಳಿಗೆಯಲ್ಲಿ ಅವನು ಇಹಲೋಕ ಬಿಟ್ಟು, ಶ್ರೀಮಾತೆಯವರ ತೋಳಿನಲ್ಲಿ ಆಸರೆ ಪಡೆದು, ಶಾಶ್ವತವಾದ ಆಶ್ರಯವನ್ನೇ ಪಡೆದನೆಂದು ನನ್ನ ನಂಬಿಕೆ.

ಚಂದ್ರನಿಂದಾಗಿಯೇ ನಾನು ಸ್ವಾಮಿ ಶಾರದಾನಂದರ ಮೇಲೆ ಹೆಚ್ಚು ಭಕ್ತಿ, ಗೌರವಗಳನ್ನು ಬೆಳೆಸಿಕೊಂಡು, ಅವರ ಸೇವೆಗೆ ನಿಯುಕ್ತನಾದೆ ಎನ್ನಬೇಕು. ಒಂದು ದಿನ ಚಂದ್ರ ನನಗೆ ಹೇಳಿದ, ಅವನು ಶ್ರೀಮಾತೆಯವರ ಬಳಿಗೆ ಹೋಗಿ ಅತ್ಯಂತ ಪ್ರಾಮಾಣಿಕತೆಯಿಂದ, ''ಅಮ್ಮಾ, ನಾನು ನಿಮ್ಮ ಸೇವೆ ಮಾಡಬೇಕು'' ಎಂದನಂತೆ. ಆಗ ಶ್ರೀಮಾತೆ, ''ಬೇಡ, ಮಗೂ. ಸರಳಾ ಇದ್ದಾಳೆ'' ಎಂದರು. ಸರಳಾ ಮುಂದೆ ಭಾರತೀಪ್ರಾಣಾ ಎಂಬ ಹೆಸರನ್ನು ಪಡೆದು ಸಂನ್ಯಾಸಿನಿಯಾದಳು; ಶಾರದಾ ಮಠದ

ಅಧ್ಯಕ್ಷೆಯಾದಳು. ''ಆದರೆ, ನೀನು ನನ್ನ ಮಗ ಶರತ್‌ನ ಸೇವೆ ಮಾಡು. ನೀನು ಅವನಿಗೆ ವಿನೀತನಾಗಿ, ನಿಷ್ಠೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಮಾಡಿದರೆ ಬ್ರಹ್ಮಜ್ಞಾನ ಹೊಂದುವೆ. ಶರತ್‌ಗೆ ಯಾರಾದರೂ ಆ ರೀತಿ ಸೇವೆ ಮಾಡಿದರೆ ಅವರು ಅತ್ಯುನ್ನತ ನೆಲೆಗೆ ಏರುವರು'' ಎಂದರು ಶ್ರೀಮಾತೆ. ಈ ಕಾರಣಕ್ಕಾಗಿ ನನಗೆ ಸ್ವಾಮಿ ಶಾರದಾನಂದರನ್ನು ಬಿಟ್ಟು ಬೇರೆಲ್ಲಿಗೂ ಹೋಗಲಾಗಲಿಲ್ಲ. ಎಲ್ಲಿಯತನಕ ಆ ಮಹಾಪುರುಷರು ತಮ್ಮ ಸೇವೆಯನ್ನು ಮಡಲು ನನಗೆ ಅವಕಾಶ ನೀಡುವರೋ, ಅಲ್ಲಿಯ ತನಕವೂ ನಾನು ಅವರ ಬಳಿಯೇ ಇರಬಯಸಿದ್ದೆ. ಅಲಹಾಬಾದ್‌ನಲ್ಲಿ ನಡೆಯುವ ಕುಂಭಮೇಳಕ್ಕೆ ಹಲವು ಮಂದಿ ಸ್ವಾಮೀಜಿಗಳು ಹೋಗಬಯಸಿದ್ದರು; ಆಗ ಸ್ವಾಮಿ ಶಾರದಾನಂದರು ನನ್ನನ್ನೊಮ್ಮೆ ಕೇಳಿದರು, ನೀನೂ ಹೋಗುತ್ತೀಯಾ? ಅಲ್ಲಿ ಅನೇಕ ಮಂದಿ ಸಾಧುಗಳು ಒಟ್ಟುಸೇರುತ್ತಾರೆ ಎಂಬುದಾಗಿ. ನಾನಂದೆ, ''ಮಹಾರಾಜ್, ನಾನು ಇಲ್ಲೇ ನೆಮ್ಮದಿಯಿಂದ ಇದ್ದೇನೆ. ನನಗೆ ಎಲ್ಲಿಗೂ ಹೋಗುವ ಬಯಕೆಯಿಲ್ಲ.''

ನನ್ನ ಪಾಲಿಗೆ ಸ್ವಾಮಿ ಶಾರದಾನಂದರು ಶ್ರೀಮಾತೆಯವರಂತೆ, ನನ್ನ ಸ್ವಂತ ತಾಯಿಯಂತೆ. ಶ್ರೀಮಾತೆಯವರ ಕೃಪೆಯಿಂದಾಗಿ ನನ್ನ ಹಾಗೂ ಸ್ವಾಮಿ ಶಾರದಾನಂದರ ನಡುವೆ ಇದ್ದ ಅಂತರವೆಲ್ಲ ಮಾಯವಾಯಿತು. ಅವರ ಸೇವೆ ಮಾಡುವ ಸೌಭಾಗ್ಯವನ್ನು ನನಗೆ ಅವರು ಒದಗಿಸಿಕೊಟ್ಟರು. ನಾನು ಶ್ರೀಮಾತೆಯವರನ್ನು ಮೊದಲ ಬಾರಿ ಭೇಟಿಯಾಗಲು ಹೋದಾಗ ಹೊಸ್ತಿಲ ಬಳಿ ಚಪ್ಪಲಿ ಬಿಟ್ಟಿದ್ದಕ್ಕಾಗಿ ಸ್ವಾಮಿ ಶಾರದಾನಂದರು ನನ್ನನ್ನು ಇನ್ನಿಲ್ಲದಂತೆ ಬೈದುಬಿಟ್ಟಿದ್ದರು. ಇದರಿಂದ ನನಗೆ ಸ್ವಾಮಿ ಶಾರದಾನಂದರೆಂದರೆ ಒಂದು ರೀತಿಯ ಭಯವುಂಟಾಗಿತ್ತು. ಅವರನ್ನ ಭೇಟಿಯಾಗದಂತೆ ನಾನು ತಪ್ಪಿಸಿಕೊಳ್ಳುತ್ತಿದ್ದೆ. ಆದರೆ ದೇವಾಲಯಕ್ಕೆ ಹೋದಾಗಲೆಲ್ಲ, ಈ ಭಯವನ್ನು ನಿವಾರಿಸು ವಂತೆ ಶ್ರೀಮಾತೆಯವರನ್ನು ನಾನು ಪ್ರಾರ್ಥಿಸುತ್ತಿದ್ದೆ. ಒಂದು ದಿನ ಇದ್ದಕ್ಕಿದ್ದಂತೆ ಸ್ವಾಮೀಜಿ ನನ್ನನ್ನು ಕರೆದು ಕೇಳಿದರು, ''ನನಗಾಗಿ ನೀನು ಈ ಪತ್ರಗಳನ್ನು ಬರೆಯಬಲ್ಲೆಯಾ?'' ''ಹೌದು, ಮಹಾರಾಜ್'' — ನಾನಂದೆ. ''ಆದರೆ ಒಂದು ವಿಷಯ'' — ಅವರೆಂದರು, ''ನೀನು ಬರೆಯುವ ಯಾವ ವಿಷಯವನ್ನಾಗಲಿ, ನಿನ್ನ ಆತ್ಮೀಯ ಗೆಳೆಯನಿಗೂ ಕೂಡ ಹೇಳ ಬೇಡ.'' ನಾನಂದೆ, ''ಮಹಾರಾಜ್, ನಾನು ನಿಮ್ಮ ವಿಶ್ವಾಸವನ್ನು ಉಳಿಸಿಕೊಳ್ಳುವಲ್ಲಿ ವಿಫಲನಾದರೆ, ನನ್ನನ್ನು ಈ ಕೆಲಸದಿಂದ ಬಿಡುಗಡೆ ಮಾಡಬಹುದು.'' ಆದರೆ ನಾನು ನನ್ನ ಮಾತನ್ನು ಉಳಿಸಿಕೊಂಡೆ. ಯಾರಾದರೂ ನನ್ನ ಬಳಿ ಈ ಬಗ್ಗೆ ಏನಾದರೂ ಪ್ರಶ್ನಿಸಿದರೆ ನಾನು ಮೌನವಾಗಿ ಬಿಡುತ್ತಿದ್ದೆ. ಸ್ವಾಮಿ ಶಾರದಾನಂದರ ಶಿಷ್ಯರೊಬ್ಬರು ಈ ಬಗ್ಗೆ ದೂರುತ್ತ, ಅವರ ಪತ್ರಗಳನ್ನು ತಾನೇ ಬರೆಯುವುದಾಗಿ ಸ್ವಾಮೀಜಿಯವರನ್ನು ಕೇಳಿಕೊಂಡಾಗ ಅವರೆಂದರು, ''ನಾನು ಪತ್ರಗಳನ್ನು ಯಾರ ಮೂಲಕ ಬರೆಸುತ್ತಿದ್ದೇ ನೆಂದರೆ, ಅವನು ಒಂದೇ ಒಂದು ಶಬ್ದವನ್ನು ಕೂಡ ಹೊರಗೆ ಹೇಳಲಾರ — ಅವನ ಜೀವ ಹೋದರೂ ಕೂಡ.'' ಆಗ ನಾನು ಯೋಚಿಸಿದೆ, ''ಇದು ಅವರಿಗೆ ಹೇಗೆ ಗೊತ್ತು?'' ನಿಜವೇನೆಂದರೆ, ವಿಶ್ವಾಸದಿಂದ ವಿಶ್ವಾಸವೇ ಹುಟ್ಟುವುದು.

ಶ್ರೀಮಾತೆಯವರಂತಹ, ಸ್ವಾಮಿ ಶಾರದಾನಂದರಂತಹ ಮಹಾವ್ಯಕ್ತಿಗಳು ತಮ್ಮ ಹಿಮಾಲಯದಂಥ ಔನ್ನತ್ಯದಿಂದ ಕೆಳಗಿಳಿದು ಬಂದು ನಮ್ಮ ಗುರುವಾಗಿ, ದಾರಿದೀಪಗಳಾಗಿ ಪರಮ ಗುರಿಯತ್ತ ನಮ್ಮನ್ನು ಮುನ್ನಡೆಸುತ್ತಾರೆ. ಈ ಜೀವನದಲ್ಲೇ ಸಾಕ್ಷಾತ್ಕಾರ ಹೊಂದುವುದು ಈ ಗುರಿ. ಆದ್ದರಿಂದ ಶ್ರೀಮಾತೆಯವರಂತಹ ಆದರ್ಶ ಗುರುವಿನ ಬಗ್ಗೆ ಮಾತನಾಡುವುದು ನನಗೆ ನಿಜವಾಗಿಯೂ ಕಷ್ಟದ ಕೆಲಸ. ನಾನು ಅವರ ಪಾದಗಳನ್ನು ಸ್ಪರ್ಶಿಸಿದ್ದೇನೆ, ಅವರ ಮುಖವನ್ನು ನೋಡಿದ್ದೇನೆ, ಅವರ ಧ್ವನಿಯನ್ನು ಕೇಳಿದ್ದೇನೆ — ಇಷ್ಟು ಮಾತ್ರ ಹೇಳಬಲ್ಲೆ.

ಈಗ ನಾನು ತೀವ್ರ ಕಾಳಜಿಯಿಂದ, ಅತ್ಯಂತ ಗಮನಕೊಟ್ಟು ನಿರೀಕ್ಷೆ ಮಾಡುತ್ತಿದ್ದೇನೆ — ಶ್ರೀಮಾತೆಯವರು ಈ ಪ್ರಪಂಚದ ಮಾಯೆಯಿಂದ ನನ್ನನ್ನು ದಾಟಿಸಿ, ಶಾಶ್ವತ ಬೆಳಕಿನ, ಅಸಾಧಾರಣ ಸೌಂದರ್ಯದ, ಕೊನೆಯಿಲ್ಲದ ಸತ್ಯ, ಆನಂದದ ಪ್ರಪಂಚಕ್ಕೆ ನನ್ನನ್ನು ಕರೆದೊಯ್ಯಲಿ ಎಂದು.

ಪ್ರೀತಿಪಾತ್ರನಾದ ಭಗವಂತನ ಅಗಲಿಕೆಯ ನೋವನ್ನು ಮನುಷ್ಯ ಭಾಷೆಯಲ್ಲಿ ವರ್ಣಿಸಲಾಗದು, ತಾರ್ಕಿಕ ಮನಸ್ಸಿನಿಂದ ಗ್ರಹಿಸಲಾಗದು; ಆದರೆ ಭಕ್ತಿ ತುಂಬಿದ ಹೃದಯದಿಂದ ಅದನ್ನು ಭಾವಿಸಿಕೊಳ್ಳಬಹುದು. ಅನೇಕ ವಸ್ತುಗಳಿಲ್ಲದೆ ನಾವು ಬದುಕಬಹುದು, ಆದರೆ ದೇವರಿಲ್ಲದೆ ಬದುಕಲಾರೆವು. ನಮ್ಮ ಆದರ್ಶಕ್ಕೆ ಸಮರ್ಪಿತವಾಗಿರಲು ಹಾಗೂ ಅದಕ್ಕೆ ನಿಷ್ಠೆಯಿಂದ ಜೀವಿಸಲು ನಾವು ಪ್ರಯತ್ನಿಸಬೇಕು. ನಾನು ಈ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಾಗಿದ್ದರೆ ಅದು ಶ್ರೀಮಾತೆಯವರ ಕೃಪೆಯಿಂದಾಗಿ ಮಾತ್ರ ಎಂದು ಅತ್ಯಂತ ವಿನೀತನಾಗಿ, ಎಲ್ಲ ಭಕ್ತಿಗೌರವಗಳೊಂದಿಗೆ ಹೇಳುತ್ತೇನೆ. ಆದ್ದರಿಂದ, ವಿಶ್ವವ್ಯಾಪಕ ಪ್ರೇಮದ ಆಧುನಿಕ ಚಿಹ್ನೆಯೂ ವ್ಯಕ್ತರೂಪವೂ ಆದ ಶ್ರೀರಾಮಕೃಷ್ಣರ, ಹಾಗೂ ಯಾವುದೇ ಪ್ರಶ್ನೆಗಳಿಲ್ಲದೆ — ನೀವು ಹೇಗಿದ್ದೀರೋ ಹಾಗೆಯೇ — ನಿಮ್ಮನ್ನು ಸ್ವೀಕರಿಸಬಲ್ಲ, ನಿಮ್ಮ ದಿವ್ಯಮಾತೆಯಾಗಬಲ್ಲ ಶ್ರೀಮಾತೆಯವರ ಆಶ್ರಯವನ್ನು ಹೊಂದಲು ನಾನು ನಿಮಗೆ ಸಲಹೆ ನೀಡುತ್ತೇನೆ. ಅವರು ನಿಮ್ಮ ಪ್ರಜ್ಞೆಯನ್ನು ಎಂತಹ ಔನ್ನತ್ಯಕ್ಕೆ ಏರಿಸಬಲ್ಲರೆಂದರೆ, ಅಲ್ಲಿ ಪರಮ ಸತ್ಯದ ಸಾಕ್ಷಾತ್ಕಾರವಾಗುವುದು, ಅಲ್ಲಿ ಎಂದೆಂದಿಗೂ ಸೂರ್ಯನು ಬೆಳಗುವನು ಹಾಗೂ ಮಾಯೆಯ ಕತ್ತಲೆ